ಸಣ್ ಸುದ್ದಿ

ಕರ್ನಾಟಕ-ಹಿಮಾಚಲ ನಡುವೆ ಕ್ರಿಕೆಟ್ ಪಂದ್ಯ

ಹುಬ್ಬಳ್ಳಿ: 19 ವರ್ಷದೊಳಗಿನವರ ಕೂಚ್ ಬೆಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕರ್ನಾಟಕ-ಹಿಮಾಚಲ ಪ್ರದೇಶ ನಡುವಿನ 4 ದಿನಗಳ ಪಂದ್ಯವು ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನ. 19ರಿಂದ 22ರ ವರೆಗೆ ಜರುಗಲಿದೆ. ನ. 17, 18ರಂದು ಉಭಯ ತಂಡಗಳು ಅಭ್ಯಾಸ ನಡೆಸಲಿವೆ ಎಂದು ಕೆಎಸ್‌ಸಿಎ ಅಧ್ಯಕ್ಷ ವೀರಣ್ಣ ಸವಡಿ ಹಾಗೂ ಸಂಚಾಲಕ ಅವಿನಾಶ ಪೋತದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಣದಿಂದ ಭವಿಷ್ಯದ ರಕ್ಷಣೆ ಜಾಗೃತಿ ಜಾಥಾ

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಇಲಾಖೆ ಹಾಗೂ ಇತರೆ ಇಲಾಖೆಗಳು ಜಂಟಿಯಾಗಿ ಭಾನುವಾರ ವಿಶ್ವ ಮಧುಮೇಹ ದಿನಾಚರಣೆ ಘೋಷವಾಕ್ಯ 'ಶಿಕ್ಷಣದಿಂದ ಭವಿಷ್ಯದ ರಕ್ಷಣೆ' ಜಾಗೃತಿಗಾಗಿ ಕಾಲ್ನಡಿಗೆ ಜಾಥಾವನ್ನು ಕಲಾ ಭವನ ಆವರಣದಿಂದ ಕರ್ನಾಟಕ ಕಾಲೇಜು ವರೆಗೆ ನಡೆಯಿತು. ಕಲಾಭವನದಿಂದ ಪ್ರಾರಂಭವಾಗಿ ಆಜಾದ್ ಪಾರ್ಕ್ ಹಾಗೂ ಜ್ಯುಬಲಿ ಸರ್ಕಲ್ ಮೂಲಕ ಸಂಚರಿಸಿ ಕೆಸಿಡಿ ಮೈದಾನದಲ್ಲಿ ಕೊನೆಗೊಂಡಿತು. ಚಾಲನೆ ನೀಡಿದ್ದ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಶಶಿ ಪಾಟೀಲ, ಎಲ್ಲ 30 ವರ್ಷ ಮೇಲ್ಪಟ್ಟ ವ್ಯಕ್ತಿಗಳು ಕಡ್ಡಾಯವಾಗಿ ಮಧುಮೇಹದ ತಪಾಸಣೆಗೊಳಗಾಗಬೇಕು ಹಾಗೂ ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ರೋಟರಿ ಕ್ಲಬ್ ಗವರ್ನರ್ ಪವನ ದೇಶಪಾಂಡೆ ಮಧುಮೇಹ ಕುರಿತಂತೆ ಎಲ್ಲ ಮುಂಜಾಗ್ರತೆ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು. ಡಾ. ಪ್ರಕಾಶ ರಾಮನಗೌಡರ ಮಧುಮೇಹದ ಚಿಕಿತ್ಸೆ ಕುರಿತು ವಿವರಿಸಿದರು. ಡಾ. ಶ್ರುತಿ ಕೌಲಗುಡ್ಡ ಒಳ್ಳೆಯ ಆಹಾರ ಸೇವನೆ ಮಾಡುವ ಪದ್ಧತಿ ಹಾಗೂ ಆರೋಗ್ಯಕರ ಜೀವನಶೈಲಿಯ ಮೂಲಕ ಮಧುಮೇಹವನ್ನು ದೂರವಿಡಬಹುದು ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಸುಜಾತಾ ಹಸವಿಮಠ ಮಧುಮೇಹ ರೋಗದ ಕುರಿತು ವಿವರಿಸಿದರು. ರೋಟರಿ ಕ್ಲಬ್ ಮಿಡ್ ಟೌನ್ ಪದಾಧಿಕಾರಿಗಳು ಇದ್ದರು.

ಕೆಎಲ್‌ಇ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ

KP

ಕುಂದಗೋಳ: ತಾಲೂಕಿನ ಸಂಶಿ ಗ್ರಾಮದ ಕೆಎಲ್‌ಇ ಸಂಸ್ಥೆಯ ಮಹಾವಿದ್ಯಾಲಯದಲ್ಲಿ ಭಾನುವಾರ ಸಂಸ್ಥೆಯ 107ನೇ ಸಂಸ್ಥಾಪನಾ ದಿನ ಆಚರಿಸಲಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಮಾತನಾಡಿ, ಕೆಎಲ್‌ಇ ಸಂಸ್ಥೆ ಕಟ್ಟಿ ಬೆಳೆಸಿದ ಮಹನೀಯರ ಆದರ್ಶ, ತತ್ವಗಳನ್ನು ಜೀವನದಲ್ಲಿ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದರು. ಇದೇ ಸಂದರ್ಭ ನೂತನ ಕಂಪ್ಯೂಟರ್ ಪ್ರಯೋಗಾಲಯ ಉದ್ಘಾಟಿಸಲಾಯಿತು. ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಎ.ಬಿ. ಉಪ್ಪಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಚ್.ಎನ್. ಪಾಟೀಲ, ಬಿ.ಎಂ. ಕಜ್ಜಿ, ಬಿ.ಬಿ. ಬೂದಿಹಾಳ, ಬಿ.ವಿ. ಸೈಬಣ್ಣವರ, ಮಲ್ಲಪ್ಪ ಕೌದಿಶೆಟ್ಟರ್, ಜಿ.ಸಿ. ರಟಗೇರಿಮಠ, ಪ್ರಾಚಾರ್ಯ ಪ್ರೊ. ರಮೇಶ ಅತ್ತಿಗೇರಿ, ಡಿ.ಬಿ. ಮುರಾರಿ, ಪಿ.ವೈ. ಬೆಂಡಿಗೇರಿ ಇದ್ದರು.

ಕಾನೂನಿಗೆ ಹೆದರಬೇಡಿ, ಅರ್ಥೈಸಿಕೊಳ್ಳಿ

ಮೆಗಾ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿದ ನ್ಯಾ. ರಾಜಶೇಖರ ತಿಳಗಂಜಿ

KP

ಮೆಗಾ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಲಾಯಿತು.

- **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಕಾನೂನಿಗೆ ಹೆದರುವ ಅವಶ್ಯಕತೆ ಇಲ್ಲ. ಬದಲಾಗಿ ಕಾನೂನು ಅರ್ಥೈಸಿಕೊಂಡು ಕಷ್ಟ ಕಾಲದಲ್ಲಿ ಬಳಸಿ ರಕ್ಷಣೆ ಪಡೆದುಕೊಳ್ಳಬಹುದು ಎಂದು ಹುಬ್ಬಳ್ಳಿ ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಪ್ರಧಾನ ಸಿವಿಲ್ ನ್ಯಾಯಾಧೀಶ ರಾಜಶೇಖರ ತಿಳಗಂಜಿ ಹೇಳಿದರು.

ತಾಲೂಕಿನ ಅದರಗುಂಚಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಕಂದಾಯ ಇಲಾಖೆ, ತಾಲೂಕು ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಾರ್ತಾ ಇಲಾಖೆ ಆಶ್ರಯದಲ್ಲಿ ನಡೆದ ಮೆಗಾ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾನೂನು ತಾಯಿ ಹೊಟ್ಟೆಯಲ್ಲಿರುವ ಮಗುವಿನಿಂದ ಹಿಡಿದು ಸಾವನ್ನಪ್ಪಿದ ನಂತರವೂ ಅನ್ವಯವಾಗುತ್ತದೆ. ಈ ನಿಟ್ಟಿನಲ್ಲಿ ಸಮಾಜದ ಕಟ್ಟ ಕಡೆಯ ದುರ್ಬಲ ವ್ಯಕ್ತಿಗಳಿಗೂ ಸಹ ಕಾನೂನು ಅರಿವು ಮೂಡಬೇಕು. ಕಡು ಬಡತನದಿಂದ ಯಾರೂ ಕಾನೂನು ನೆರವಿನಿಂದ ವಂಚಿತರಾಗಬಾರದು. ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ದೊರೆಯಬೇಕಾಗಿದೆ. ಎಲ್ಲರಿಗೂ ಉಚಿತವಾಗಿ ಕಾನೂನು ನೆರವು ದೊರೆಯುವ ನಿಟ್ಟಿನಲ್ಲಿ ಕಾನೂನು ಸೇವಾ ಸಮಿತಿ ಇದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ದೇಶ ಸ್ವಾತಂತ್ರ್ಯಗೊಂಡು 75 ವರ್ಷ ಕಳೆದಿವೆ. ಆದರೆ ಈ ವರೆಗೆ ಜನರಿಗೆ ಸರಿಯಾದ ಸವಲತ್ತು ದೊರೆಯುತ್ತಿಲ್ಲ ಎಂಬುದು ವಿಷಾದನೀಯ. ಈಗಾಗಲೇ ಕಳೆದ ವಿವಿಧ ಗ್ರಾಮಗಳಲ್ಲಿ 15 ದಿನಗಳಿಂದ ಕಾನೂನಿನ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಡಾ. ಬಿ.ಆರ್. ಅಂಬೇಡ್ಕರ್ ರಚಿಸಿದ ಕಾನೂನು ಚೆನ್ನಾಗಿದೆ. ಆದರೆ ಅದನ್ನು ಅರಿಯದವರಿಗೆ ಕಾನೂನು ಕಬ್ಬಿಣದ ಕಡಲೆಯಾಗಿದೆ. ಹೀಗಾಗಿ ಅರಿವಿನ ಕೊರತೆಯಿಂದ ಸದುಪಯೋಗ ಪಡೆಯಲು ಆಗುತ್ತಿಲ್ಲ. ಎಲ್ಲರೂ ಹೆಚ್ಚು ಕಾನೂನನ್ನು ಓದಿ ಅರಿತು ಕಷ್ಟದ ಸಮಯದಲ್ಲಿ ಕಾನೂನು ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

> - ದೇಶ ಸ್ವಾತಂತ್ರ್ಯಗೊಂಡು 75 ವರ್ಷ ಕಳೆದಿವೆ. ಆದರೆ ಈ ವರೆಗೆ ಜನರಿಗೆ ಸರಿಯಾದ ಸವಲತ್ತು ದೊರೆಯುತ್ತಿಲ್ಲ
> - ಕಾನೂನು ತಾಯಿ ಹೊಟ್ಟೆಯಲ್ಲಿರುವ ಮಗುವಿನಿಂದ ಹಿಡಿದು ಸಾವನ್ನಪ್ಪಿದ ನಂತರವೂ ಅನ್ವಯವಾಗುತ್ತದೆ.
> - ಈ ನಿಟ್ಟಿನಲ್ಲಿ ಸಮಾಜದ ಕಟ್ಟ ಕಡೆಯ ದುರ್ಬಲ ವ್ಯಕ್ತಿಗಳಿಗೂ ಸಹ ಕಾನೂನು ಅರಿವು ಮೂಡಬೇಕು
> - ಕಾನೂನಿನ ಮುಂದೆ ಎಲ್ಲರೂ ಸಮಾನರು. ಆದರೆ ಇದು ವಾಸ್ತವದಲ್ಲಿ ಕಂಡುಬರುತ್ತಿಲ್ಲ ಎಂಬುದು ದುರ್ದೈವ.

ವಕೀಲರಾದ ಸವಿತಾ ಪಾಟೀಲ ಉಪನ್ಯಾಸ ನೀಡಿ, ಕಾನೂನಿನ ಮುಂದೆ ಎಲ್ಲರೂ ಸಮಾನರು. ಆದರೆ ಇದು ವಾಸ್ತವದಲ್ಲಿ ಕಂಡುಬರುತ್ತಿಲ್ಲ ಎಂಬುದು ದುರ್ದೈವ. ಪರಿಸರ ಯಾವ ರೀತಿ ಮಾನವನಿಗೆ ಅವಶ್ಯವೋ, ಹಾಗೇ ಕಾನೂನಿನ ಅರಿವು ಮನುಷ್ಯನಿಗೆ ಜೀವವಿದ್ದಂತೆ. ಸಂವಿಧಾನ ಮನುಷ್ಯನಿಗೆ ಹಕ್ಕಿನ ಜತೆಗೆ ಕರ್ತವ್ಯ ನೀಡಿದೆ. ಅದನ್ನು ಅರಿತು ನಾವು ನಡೆದುಕೊಳ್ಳಬೇಕು ಎಂದರು.

ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡ್ರ ಮಾತನಾಡಿದರು. ಕಾರ್ಯಕ್ರಮದಲ್ಲಿ ಉಪ ತಹಸೀಲ್ದಾರ್ ಗಣೇಶ ಹುಬ್ಬಳಿಕರ, ಜಿಪಂ ಮಾಜಿ ಸದಸ್ಯ ಜಿ.ವಿ. ಕಳ್ಳಿಮನಿ, ವಕೀಲ ಜಿ.ಎಫ್. ಸಂಕಣ್ಣವರ, ಪಿಡಿಓ ಮುಕ್ತುಂಹುಸೇನ ಕರಡಿಗುಡ್ಡ, ಗ್ರಾಪಂ ಅಧ್ಯಕ್ಷಸಿದ್ದನಗೌಡ ಕಂಟೆಪ್ಪಗೌಡ್ರ, ಸದಸ್ಯರಾದ ಮುಕ್ತುಂಹುಸೇನ ಬಡಿಗೇರ, ಹೊನ್ನಪ್ಪ ಸೋಲಾರಗೊಪ್ಪ, ಪವಿತ್ರಾ ಎಲಿವಾಳ, ಚಂದ್ರಶೇಖರ ಕುರ್ತುಕೋಟಿ ಸೇರಿ ಗ್ರಾಪಂ ಸದಸ್ಯರು, ವಕೀಲರ ಸಂಘದ ಸದಸ್ಯರು, ಗ್ರಾಮದ ಸ್ವ-ಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು. ಶಿಕ್ಷಕರಾದ ಸುಭಾಷ್ ಅಂಚಿ ನಿರೂಪಿಸಿ, ಮಧು ಹರ್ತಿ ಸ್ವಾಗತಿಸಿದರು.

ಸಂಗೀತ ವಲಯದಲ್ಲಿ ಆಗಸ್ತ್ಯನ ಪೆಹಲಾ ಪ್ಯಾರ್ ಸಂಚಲನ

ಧಾರವಾಡ ಜೆಎಸ್ಸೆಸ್ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ

- **ಬಸವರಾಜ ಹಿರೇಮಠ**
  ಕನ್ನಡಪ್ರಭ ವಾರ್ತೆ ಧಾರವಾಡ

ಹದಿನೈದರ ಹರೆಯದ ಧಾರವಾಡದ ಆಗಸ್ತ್ಯ ದೊಡಮನಿ ಈಗ ಇನ್‌ಸ್ಟಾಗ್ರಾಂ ವೀಕ್ಷಕರ ಕಣ್ಮಣಿ.

ತನ್ನ ಸುಶ್ರಾವ್ಯ ಹಾಡುಗಾರಿಕೆಯಿಂದ ಅಲ್ಪಾವಧಿಯಲ್ಲಿಯೇ ಧಾರವಾಡದ ಧ್ವನಿ ಎಂಬ ಬಿರುದಾಂಕಿತ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಹೆಸರುವಾಸಿಯಾಗಿದ್ದ ಧಾರವಾಡದ ಕಿರೀಟಕ್ಕೆ ಆಗಸ್ತ್ಯ ಬಾಲಿವುಡ್ ಸಂಗೀತದ ಮೂಲಕ ಮತ್ತೊಂದು ಗರಿ ಸೇರಿಸಿದ್ದಾನೆ.

ಆತ ಹಾಡಿದ ಪೆಹಲಾ ಪ್ಯಾರ್ ಗೀತೆ ಇನ್‌ಸ್ಟಾಗ್ರಾಂನಲ್ಲಿ ದಿಢೀರನೆ ಜನಪ್ರಿಯವಾಗಿದ್ದು, ಒಂದೇ ದಿನದಲ್ಲಿ 18 ಲಕ್ಷ ಜನರು ಈ ಹಾಡನ್ನು ಕೇಳಿ, ನೋಡಿ ಆನಂದಿಸಿದ್ದಾರೆ. ಕಬೀರ ಸಿಂಗ್ ಮೂಲತಃ ಈ ಹಾಡು ಹಾಡಿದವರು. ಆದರೆ, ಅವರನ್ನು ಮೀರಿಸುವಂತೆ ಆಗಸ್ತ್ಯ ತನ್ನ ಕಂಚಿನ ಕಂಠದ ಮೂಲಕ ಗೀತೆಯನ್ನು ಪ್ರಸ್ತುತ ಪಡಿಸಿ ಕೇಳುಗರ ಮನಸೂರೆಗೊಂಡಿದ್ದಾನೆ.

ಮಂಜುನಾಥೇಶ್ವರ ಸೆಂಟ್ರಲ್ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿರುವ ಆಗಸ್ತ್ಯ ಸಾಂಪ್ರದಾಯಿಕವಾಗಿ ಸಂಗೀತದಲ್ಲಿ ಯಾವುದೇ ತರಬೇತಿ ಪಡೆದಿಲ್ಲ. ಆದರೆ, ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಆತ, ಕಬೀರಸಿಂಗ್, ಅರಿಜೀತಸಿಂಗ್, ಶ್ರೇಯಾ ಘೋಶಾಲ್ ಮುಂತಾದವರ ಹಾಡು ಕೇಳಿ ತಾನೂ ಹಾಡಲು ಪ್ರಯತ್ನಿಸಿದವನು. ಕಬೀರ ಸಿಂಗರ ಪೆಹಲಾ ಪ್ಯಾರ್ ಆಗಸ್ತ್ಯನಿಗೆ ಲಕ್ಷಾಂತರ ಸಂಗೀತಪ್ರೇಮಿಗಳ ಪ್ಯಾರ್ ಒದಗಿಸಿಕೊಟ್ಟಿದೆ. ಜತೆಗೆ ಸಂಗೀತ ವಲಯದಲ್ಲಿ ಸಂಚಲನ ಮೂಡಿಸಿದೆ. ಈತನ ಸಾಧನೆಗೆ ಸಂಸ್ಥೆ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಹಾಗೂ ಶಿಕ್ಷಕರು ಕೊಂಡಾಡಿದ್ದಾರೆ.

ಶಾಲೆಯಲ್ಲಿ ಶಿಕ್ಷಕರಾಗಲಿ ಅಥವಾ ಆಗಸ್ತ್ಯ ಪಾಲಕರಾಗಲಿ ಆತನಲ್ಲಿದ್ದ ಸಂಗೀತ ಪ್ರತಿಭೆ ಗುರುತಿಸಿರಲಿಲ್ಲ. ಶಾಲೆಯ ಒಂದು ಸಮಾರಂಭದಲ್ಲಿ ತನ್ನ ಅತ್ಯುತ್ತಮ ಹಾಡುಗಾರಿಕೆ ಮೂಲಕ ಆಗಸ್ತ್ಯ ಎಲ್ಲರ ಗಮನ ಸೆಳೆದನು. ರೋಟರಿ ಇಂಟರ್‌ನ್ಯಾಶನಲ್ ಸ್ಕೂಲ್ ಆಫ್ ಮ್ಯೂಸಿಕ್ ಆಗಸ್ತ್ಯನ ಪ್ರತಿಭೆ ಕಂಡು ಅವನಿಗೆ ತರಬೇತಿ ನೀಡಿ ಉತ್ತೇಜಿಸಲು ಮುಂದಾಯಿತು. ಆಗಸ್ತ್ಯಮಾರ್ಗದರ್ಶಕರಾದ ವಿಶಾಲಸಿಂಗ್ ಈ ಶಾಲೆಯಲ್ಲಿ 500 ಮಕ್ಕಳಿಗೆ ಸಂಗೀತ ಕಲಿಸುತ್ತಿದ್ದು, ಆಗಸ್ತ್ಯ ಪ್ರತಿಭೆ ಬಗ್ಗೆ ಅವರಿಗೆ ವಿಶೇಷ ಪ್ರೀತಿ ಮತ್ತು ಕಾಳಜಿ. ಕಳೆದ ಒಂದು ವರ್ಷದಿಂದ ತಾನು ಹಾಡಿದ ಹಾಡುಗಳನ್ನು ಆಗಸ್ತ್ಯ ಇನ್‌ಸ್ಟಾಗ್ರಾಂದಲ್ಲಿ ಅಪ್‌ಲೋಡ್ ಮಾಡುತ್ತಿದ್ದಾನೆ. ಆದರೆ, ಪೆಹಲಾ ಪ್ಯಾರ್ ಅವನನ್ನು ಹಿರೋ ಮಾಡಿದೆ ಎನ್ನುತ್ತಾರೆ ಶಾಲಾ ಮುಖ್ಯಾಧ್ಯಾಪಕಿ ಎಸ್. ಸಾಧನಾ.

ಮಾಹಿತಿ ತಂತ್ರಜ್ಞಾನದಲ್ಲಿ ಪದವಿ ಪಡೆಯುವ ಇಚ್ಛೆಯುಳ್ಳ ಆಗಸ್ತ್ಯ ಸಂಗೀತದಲ್ಲಿ ತನ್ನನ್ನು ತೊಡಗಿಸಿಕೊಂಡು ಅದೇ ಕ್ಷೇತ್ರದಲ್ಲಿ ಮಿನುಗುವ ಆಶಯವನ್ನು ಪತ್ರಿಕೆ ಎದುರು ವ್ಯಕ್ತಪಡಿಸಿದನು.

ಆಧುನಿಕ ಜಗತ್ತಿನಲ್ಲಿ ಸ್ಪರ್ಧೆ ಅನಿವಾರ್ಯ: ಚಂದ್ರಪ್ಪ

- **ಕನ್ನಡಪ್ರಭ ವಾರ್ತೆ** ಧಾರವಾಡ

ಸಾಧನೆಯ ಹಾದಿ ಸುಗಮವಲ್ಲ. ಛಲವಿದ್ದವರು ಮಾತ್ರ ಆ ಹಾದಿಯಲ್ಲಿ ಸಾಗಲು ಸಾಧ್ಯ ಎಂದು ಶಾಸಕ ಹಾಗೂ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಅಧ್ಯಕ್ಷ ಎಂ. ಚಂದ್ರಪ್ಪ ಹೇಳಿದರು.

ಕರ್ನಾಟಕ ರಾಜ್ಯ ಭೋವಿ (ವಡ್ಡರ) ಸಂಘವು ಜಿಲ್ಲಾ ಘಟಕದ ಸಹಕಾರದಲ್ಲಿ ಆಲೂರು ಭವನದಲ್ಲಿ ಆಯೋಜಿಸಿದ್ದ ಸಚಿವರಿಗೆ, ಶಾಸಕರಿಗೆ ಸನ್ಮಾನ ಹಾಗೂ ರಾಜ್ಯಮಟ್ಟದ ಭೋವಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದಲ್ಲಿ ಮಾತನಾಡಿದ ಅವರು, ನಮ್ಮ ಕ್ರಿಯೆಗಳಿಗೆ ಪೂರಕವಾಗಿ ಪ್ರತಿಕ್ರಿಯೆ ಇರಬೇಕು. ಅದೇ ರೀತಿ ನಾವು ಅಪೇಕ್ಷೆ ಪಟ್ಟಂತೆ ಫಲಿತಾಂಶ ಪಡೆಯಲು ಅತೀ ವೇಗವಾಗಿ ಸಾಧನೆಯ ಹಾದಿಯಲ್ಲಿ ಸಾಗಬೇಕಾಗಿದೆ. ಪ್ರತಿಭೆ ಎಲ್ಲರಲ್ಲೂ ಇದೆ. ಆದರೆ ಆಧುನಿಕ ಜಗತ್ತಿನಲ್ಲಿ ಸ್ಪರ್ಧೆ ಅನಿವಾರ್ಯ ಎಂದರು.

KP

ಕರ್ನಾಟಕ ರಾಜ್ಯ ಭೋವಿ (ವಡ್ಡರ) ಸಂಘವು ಜಿಲ್ಲಾ ಘಟಕದ ಸಹಕಾರದಲ್ಲಿ ಆಲೂರು ಭವನದಲ್ಲಿ ಆಯೋಜಿಸಿದ್ದ ಸಮಾರಂಭ.

ಭೋವಿ ಸಂಘದ ಅಧ್ಯಕ್ಷ ಎಸ್.ಎಲ್. ಗಂಗಾಧರಪ್ಪ ಮಾತನಾಡಿ, ಮಾಡುವ ಕೆಲಸದಲ್ಲಿ ಶ್ರದ್ಧೆ, ನಿಷ್ಠೆ ಮತ್ತು ನೈತಿಕ ಮೌಲ್ಯ ಇರಬೇಕು. ಮರಳಿ ಯತ್ನವ ಮಾಡು ಎಂಬ ಮಾತಿನಂತೆ ನಿರಂತರ ಪ್ರಯತದಿಂದ ಮಾತ್ರ ಯಶಸ್ಸು ಸಿಗಬಲ್ಲದು. ಜತೆಗೆ ಜೀವನದ ಸವಾಲು ಎದುರಿಸುವ ಶಕ್ತಿ, ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಶಾಸಕ ಅಮೃತ ದೇಸಾಯಿ, ಬಯಲು ಸೀಮೆ ಅಭಿವೃದ್ಧಿ ನಿಗಮದ ಅಧ್ಯಕ್ಷ ತವನಪ್ಪ ಅಷ್ಟಗಿ ಮಾತನಾಡಿದರು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಚಿತ್ರದುರ್ಗ ತಾಲೂಕಿನ ಕಾತ್ರಾಳ್ ಅಮ್ಮಪ್ಪನಹಳ್ಳಿ ಅವಧೂತ ಮಠದ ಗಂಗಾಧರ ಸ್ವಾಮೀಜಿ ಇದ್ದರು. ಭೀಮಸಿ ನೆಮಿಕಲ್, ಮಾದೇವಪ್ಪ ನರಗುಂದ, ಮಹದೇವಪ್ಪ ಕರಿದುರ್ಗನವರ, ರಾಜಶೇಖರ ದುಮ್ಮವಾಡ, ಬಸವರಾಜ ಆನೆಗುಂದಿ, ತುಳಜಪ್ಪ ಪೂಜಾರ, ಬಸವರಾಜ ರುದ್ರಾಪುರ, ಮಂಜುನಾಥ ಹಳಿಯಾಳ, ಶ್ರೀನಿವಾಸ ಅವರೊಳ್ಳಿ, ಹನುಮಂತ ಮನಗುಂಡಿ ಇದ್ದರು.

ಕನಕದಾಸರ ಆದರ್ಶ ಅಳವಡಿಸಿಕೊಳ್ಳಲಿ

- **ಕನ್ನಡಪ್ರಭ ವಾರ್ತೆ** ನವಲಗುಂದ

ಸಮಾಜದ ಅಂಕು-ಡೊಂಕು ತಿದ್ದಲು, ಮೌಢ್ಯ ತೊಲಗಿಸಲು ಸಮರ ಸಾರಿದ್ದ ಕನಕದಾಸರ ಆದರ್ಶವನ್ನು ಇಂದಿನ ಯುವ ಪೀಳಿಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಿಕ್ಷಕ ಮಂಜುನಾಥ ವಗ್ಗರ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ತಹಸೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕಾಡಳಿತ ಮತ್ತು ಕನಕ ಯುವಶಕ್ತಿ ಹಾಗೂ ಕುರುಬ ಸಮಾಜದ ಸಹಯೋಗದಲ್ಲಿ ನಡೆದ ಸಂತ ಶ್ರೇಷ್ಠ ಕನಕದಾಸರ 535ನೇ ಜಯಂತಿಯಲ್ಲಿ ಅವರು ಮಾತನಾಡಿದರು. ಕುರುಬ ಸಮಾಜದ ತಾಲೂಕು ಅಧ್ಯಕ್ಷ ಯೋಗಪ್ಪಗೋಲನಾಯ್ಕರ ಮಾತನಾಡಿ, ಕನಕದಾಸರ ತತ್ವಗಳು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದಂತೆ ಉಳಿದಿವೆ. ಅವರು ನಾಡಿಗೆ ನೀಡಿದ ಕೊಡುಗೆ ಅಪಾರವಾಗಿದೆ. ಕನಕದಾಸರ ಜಯಂತಿ ಕೇವಲ ಭಾವಚಿತ್ರದ ಪೂಜೆಗೆ ಸೀಮಿತಗೊಳಿಸದೆ ಶಾಲಾ ಮಕ್ಕಳು, ಯುವಕರ ಮನದಲ್ಲಿ ಅವರ ಚಿಂತನೆಗಳು ಬೆಳೆಯಬೇಕು ಎಂದರು. ಇದೇ ವೇಳೆ ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ತಹಸೀಲ್ದಾರ್ ಅನಿಲ ಬಡಿಗೇರ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಒ ಎಸ್.ಎಂ. ಕಾಂಬಳೆ, ಪುರಸಭೆ ಮುಖ್ಯಾಧಿಕಾರಿ ವೀರಣ್ಣ ಹಸಬಿ, ಎಎಸ್‌ಐ ಯಲ್ಲಪ್ಪ ಮೇಟಿ, ಕನಕ ಕಲ್ಯಾಣ ಮಂಟಪದ ಅಧ್ಯಕ್ಷೆ ಪ್ರೇಮಾ ನಾಯ್ಕರ, ಪ್ರಮುಖರಾದ ಮಹಾದೇವಿ ಮಾಸ್ತಿ, ಕಲ್ಲಪ್ಪ ಹುಬ್ಬಳ್ಳಿ, ಯಲ್ಲಪ್ಪ ಸೂರೇಬಾನ, ಚಂದ್ರು ಚಿಕ್ಕಣ್ಣವರ, ಪ್ರವೀಣ ಮೂಗಣ್ಣವರ, ಮಲ್ಲಿಕಾರ್ಜುನ ವಗ್ಗರ ಇದ್ದರು. ಕುರುಬ ಸಮಾಜದ ವತಿಯಿಂದ ಕನಕದಾಸರ ಭಾವಚಿತ್ರ ದೊಂದಿಗೆ ಪಟ್ಟಣದಲ್ಲಿ ಮೆರವಣಿಗೆ ನಡೆಯಿತು.

ತಾಲೂಕು ಕೇಂದ್ರದಲ್ಲಿ ಕಚೇರಿ ಪ್ರಾರಂಭಿಸಿ

ಅಣ್ಣಿಗೇರಿ ತಾಲೂಕು ಪಂಚಾಯಿತಿ ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಲಲಿತಾ ಲಮಾಣಿ ಸೂಚನೆ

KP